# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 115 (196) |
| ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 05.03.2025 |
| ಉತ್ತರಿಸುವ ಸಚಿವರು | : ಮಾನ್ಯ ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರ ಜಿಲ್ಲಾ ಮಟ್ಟದ ಮುಖ್ಯಸ್ಥರು ಯಾರು ಹಾಗೂ ಇತರ ಸದಸ್ಯರು ಯಾರು: (ವಿವರ ನೀಡುವುದು)</td><td>ವಿಪತ್ತು ನಿರ್ವಹಣಾ ಕಾಯ್ದೆ, 2005 ರ ಸೆಕ್ಷನ್ 25 ರಲ್ಲಿ ಕಡ್ಡಾಯಗೊಳಿಸಿದಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ರಚಿಸಲಾಗಿದೆ. ಸದರಿ ಪ್ರಾಧಿಕಾರಕ್ಕೆ ಅಧ್ಯಕ್ಷರು ಮತ್ತು ಸದಸ್ಯರ ಸಂಯೋಜನೆಯನ್ನು ಮಾಡುವ ಬಗ್ಗೆ ವಿಪತ್ತು ನಿರ್ವಹಣಾ ಕಾಯ್ದೆಯ ಸೆಕ್ಷನ್ 25(2), 25(3), 25(4) ರಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಅದರಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರು ಮಾಹಿತಿ ಕೆಳಕಂಡಂತಿರುತ್ತಾರೆ.<br><br>
<table>
<tr><th>ಕ್ರ. ಸಂ.</th><th>ಪದನಾಮ</th><th>ಪ್ರಾಧಿಕಾರದ ಹುದ್ದೆ</th></tr>
<tr><td>1</td><td>ಜಿಲ್ಲಾಧಿಕಾರಿ</td><td>ಅಧ್ಯಕ್ಷರು</td></tr>
<tr><td>2</td><td>ಜಿಲ್ಲಾ ಪಂಚಾಯತ್ ಅಧ್ಯಕ್ಷರು</td><td>ಸಹ-ಅಧ್ಯಕ್ಷರು</td></tr>
<tr><td>3</td><td>ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ</td><td>ಸದಸ್ಯರು</td></tr>
<tr><td>4</td><td>ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ</td><td>ಸದಸ್ಯರು</td></tr>
<tr><td>5</td><td>ಜಿಲ್ಲಾ ಆರೋಗ್ಯ ಅಧಿಕಾರಿ</td><td>ಸದಸ್ಯರು</td></tr>
<tr><td>6</td><td>ಜಂಟಿ ನಿರ್ದೇಶಕರು, ಜಿಲ್ಲಾ ಕೃಷಿ ಇಲಾಖೆ</td><td>ಸದಸ್ಯರು</td></tr>
<tr><td>7</td><td>ಅಪರ ಜಿಲ್ಲಾಧಿಕಾರಿ</td><td>ಮುಖ್ಯ ಕಾರ್ಯ ನಿರ್ವಹಣಾಧಿಕಾರಿ</td></tr>
</table>
</td></tr>
</table>

| | | |
|---|---|---|
| ಆ | ಕರ್ನಾಟಕ ರಾಜ್ಯದಲ್ಲಿ ಆಯಾಯ ವಿಪತ್ತು ಸಂದರ್ಭದಲ್ಲಿ ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮೂಲಕ ಗುರುತಿಸಿದ ಅಪಾಯಕಾರಿ ಸ್ಥಳಗಳ ಸಂಖ್ಯೆಯೆಷ್ಟು: ಅವುಗಳ ನಿರ್ವಹಣೆ ಮತ್ತು ಪರಿಣಾಮಕಾರಿಯಾಗಿ ಸರಿಪಡಿಸುವಿಕೆಗೆ (Mitigation) ಹೇಗೆ ಕ್ರಮವಹಿಸಲಾಗುತ್ತಿದೆ: ಪ್ರತಿ ವರ್ಷ ಈ ಅಪಾಯಕಾರಿ ಸ್ಥಳಗಳಲ್ಲಿ ಸಮಸ್ಯೆಗಳು ಪುನರಾವರ್ತನೆಯಾಗುತ್ತಿದೆಯೇ: ಸಮಸ್ಯೆಗಳು ಪುನರಾವರ್ತನೆಯಾಗದಂತೆ ಸಂಬಂಧಪಟ್ಟ ಇಲಾಖೆಗಳಿಗೆ ಅಗತ್ಯಕ್ರಮವಹಿಸಲು ಸೂಚಿಸಲಾಗಿದೆಯೇ: ಮತ್ತು ಯಾವ ರೀತಿ ಕ್ರಮವಹಿಸಲಾಗುತ್ತಿದೆ: (ವಿವರ ನೀಡುವುದು) | ರಾಜ್ಯದ 23 ಜಿಲ್ಲೆಗಳ 123 ತಾಲ್ಲೂಕುಗಳ ಒಟ್ಟು 925 ಗ್ರಾಮ ಪಂಚಾಯಿಗಳನ್ನು ಪ್ರವಾಹ ಅಪಾಯದ ಪ್ರದೇಶಗಳೆಂದು ಮತ್ತು ರಾಜ್ಯದ 08 ಜಿಲ್ಲೆಗಳ 50 ತಾಲ್ಲೂಕುಗಳ ಒಟ್ಟು 871 ಗ್ರಾಮ ಪಂಚಾಯ್ತಿಗಳನ್ನು ಭೂಕುಸಿತದ ಅಪಾಯದ ಪ್ರದೇಶಗಳೆಂದು ಗುರುತಿಸಲಾಗಿದೆ.<br><br>ಈ ದುರ್ಬಲ ಪ್ರದೇಶಗಳಲ್ಲಿ ನೈಋತ್ಯ ಮುಂಗಾರಿನ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಸನ್ನದ್ಧತೆ ಮತ್ತು ಪ್ರತಿಕ್ರಿಯೆ ಕ್ರಮಗಳ ಕುರಿತು ವಿವರವಾದ ಸುತ್ತೋಲೆಯನ್ನು ಹೊರಡಿಸಲಾಗಿದೆ.<br><br>ಪ್ರವಾಹ ಮತ್ತು ಭೂಕುಸಿತಕ್ಕೆ ಗುರಿಯಾಗುವ ಪ್ರದೇಶಗಳ ವಿವರಗಳನ್ನು ಕ್ರಿಯಾ ಯೋಜನೆಯಲ್ಲಿ ವಿವರಿಸಲಾಗಿದ್ದು, ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮತ್ತು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. |
| ಇ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿಗೆ ಕೃತಕ ನೆರೆ ಬರುವ ಪ್ರದೇಶ, ಭೂಕುಸಿತ ಸಂಭಾವ್ಯ ಸ್ಥಳಗಳು, ಅಸುರಕ್ಷಿತ ಕಾಲುಸಂಕ/ಸೇತುವೆ, ರಸ್ತೆ ಕುಸಿತ, ಅಪಾಯಕಾರಿ ಮತ್ತು ಅಸುರಕ್ಷಿತ ಕಟ್ಟಡ ಮತ್ತು ಮರ ಇತ್ಯಾದಿಗಳನ್ನು ಗುರುತಿಸಿ ಜಿಪಿಎಸ್ ಸಹಿತ ವರದಿಸಿದ್ದು ಆಯಾಯ ಸಂದರ್ಭಗಳಲ್ಲಿ ಸೂಚನಾ ಫಲಕ ಅಳವಡಿಸಿದ್ದು ನಂತರ ಈ ಸ್ಥಳಗಳ ಬಗ್ಗೆ ಯಾವ ಕ್ರಮಜರುಗಿಸಲಾಗಿದೆ: | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಆಯಾ ಜಿಲ್ಲೆಗಳ ಅಪಾಯ ಮತ್ತು ದುರ್ಬಲತೆಯ ವಿವರಗಳ ಆಧಾರದ ಮೇಲೆ ಉಪಶಮನ ಯೋಜನೆಗಳನ್ನು ಗುರುತಿಸಿದ್ದಾರೆ. ಈ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಬಳಸಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂದಿಸಿದಂತೆ |

| | | |
|---|---|---|
| ಈ | ಇಂತಹ ಸ್ಥಳಗಳಲ್ಲಿ ತುರ್ತಾಗಿ ಕೈಗೊಳ್ಳಬೇಕಾದ ನಿರ್ಮಾಣ, ದುರಸ್ಥಿ ಕಾಮಗಾರಿಗಳಾದ ಕಾಲು ಸಂಕ/ಸೇತುವೆ ರಚನೆ, ತಡೆಗೋಡೆ ರಚನೆ, ಮರ ತೆರವುಗೊಳಿಸುವಿಕೆ, ಇತ್ಯಾದಿಗಳನ್ನು ಕೈಗೊಳ್ಳುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಿದೆಯೇ: ಎಷ್ಟು ಕಾಮಗಾರಿಗಳನ್ನು ಚಾಲ್ತಿ ಸಾಲಿನ ಸಂಬಂಧಪಟ್ಟ ಇಲಾಖೆಗಳ ಕ್ರಿಯಾ ಯೋಜನೆಯಲ್ಲಿ ಸೇರಿಸಲಾಗಿದೆ: ಪ್ರಸ್ತುತ ಅವುಗಳ ಸ್ಥಿತಿಗತಿಗಳೇನು? (ವಿವರ ನೀಡುವುದು) | ರೂ.694.00 ಲಕ್ಷಗಳ ಮತ್ತು ಉಡುಪಿ ಜಿಲ್ಲೆಗೆ ಸಂಬಂದಿಸಿದಂತೆ ರೂ.525.00 ಲಕ್ಷಗಳ ಅಂದಾಜು ವೆಚ್ಚದ ಉಪಶಮನ ಕಾಮಗಾರಿಗಳ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಅಂದರೆ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿ (SDMF) ಮತ್ತು ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDMF) ಅಡಿಯಲ್ಲಿ ಅಂದಾಜು ರೂ.200.00 ಕೋಟಿ ವೆಚ್ಚದಲ್ಲಿ ಭೂಕುಸಿತ ಉಪಶಮನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.<br><br>ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDMF) ಅಡಿಯಲ್ಲಿ ಅಂದಾಜು ರೂ.200.00 ಕೋಟಿ ವೆಚ್ಚದಲ್ಲಿ ಮೂರು ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಮುದ್ರ ಕೊರೆತ ತಗ್ಗಿಸುವ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.<br><br>ಸದರಿ ಯೋಜನೆಗಳನ್ನು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ರಾಜ್ಯ ವಿಪತ್ತು ಉಪಶಮನ ನಿಧಿ ಮತ್ತು ರಾಷ್ಟ್ರೀಯ ವಿಪತ್ತು ಉಪಶಮನ ನಿಧಿಯ ಅಡಿಯಲ್ಲಿ ಕೈಗೊಳ್ಳಲಾಗುವುದು. |

ಸಂಖ್ಯೆ: ಕಂಇ 85 ಟಿಎನ್ಆರ್ 2025

(**ಕೃಷ್ಣ ಭೈರೇಗೌಡ**)
ಕಂದಾಯ ಸಚಿವರು